ಅಧ್ಯಕ್ಷರು :- ಮಾನ್ಯ ಶಿವಾನಂದ ಪಾಟೀಲ್‌ರವರು ಕುಳಿತಿದ್ದಾರೆ. ಶಿವಾನಂದ ಪಾಟೀಲ್‌ರೇ ಏನು ಕೇಳುತ್ತೀರಿ? ನೀವು ಆವತ್ತು ಮಾತನಾಡಿದ್ದೀರಿ, ನಮ್ಮ ಸಹಕಾರ ಸಚಿವರು ಉತ್ತರ ಕೊಟ್ಟಿದ್ದಾರೆ, Companies Act ಎಂದು ಗೃಹ ಸಚಿವರೂ ಉತ್ತರ ಕೊಟ್ಟಿದ್ದಾರೆ. ಈಗ ಏನಾದರೂ ಕೇಳುತ್ತೀರಾ? ಕೇಳುವುದಾದರೆ ಕೇಳಿ. ಒಂದು ಪಾಯಿಂಟ್ ನಾನು ಏನೋ ಕೇಳಲಿಲ್ಲವೆಂದು ಹೇಳುತ್ತಿದ್ದೀರಿ.

14. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಚಾರ :

(ಅ) ಸಿದ್ಧೇಶ್ವರ ಸಹಕಾರ ಬ್ಯಾಂಕಿನಲ್ಲಿನ ದುರ್ವ್ಯವಹಾರದ ಬಗ್ಗೆ :

ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನ ಬಾಗೇವಾಡಿ) :- ಮಾನ್ಯ ಅಧ್ಯಕ್ಷರೆ, ಅವರು ಅವತ್ತೂ ಉತ್ತರ ಕೊಡಲಿಲ್ಲ. ಇವತ್ತೂ ನಮ್ಮ ಸ್ಥಿತಿ ಅದೇ ಇದೆ. ಏಕೆಂದರೆ, ನೀವು ಎಡಕ್ಕೂ ನೋಡಿ, ಬಲಕ್ಕೂ ನೋಡಿ. ಹಣೆಬರಹ ಹಾಗಿದೆ. ಮುಂದೆ ನೋಡಿದರೆ ಗೊತ್ತಾಗುತ್ತದೆ. ಮಾನ್ಯ ಮಾಧುಸ್ವಾಮಿಯವರ ಹಣೆಬರಹ ಏನಾಯಿತು, ಮಾನ್ಯ ಧ್ರುವನಾರಾಯಣ್‌ರವರ ಹಣೆಬರಹ ಏನಾಯಿತು ನಮ್ಮದೂ ಅದೇ ಆಗುತ್ತದೆ. ನಮಗೆ ಗೊತ್ತಿದೆ...

ಶ್ರೀ ಹೆಚ್. ನಿಂಗಪ್ಪ :- ಕೋರಂ ಇಲ್ಲ.

ಶ್ರೀ ಶಿವಾನಂದ ಎಸ್. ಪಾಟೀಲ್ :- ಕೋರಂ ಇಲ್ಲದೇ ಹೌಸ್ ನಡೆಸುವುದು. ಬರೆಯುವುದಕ್ಕೂ ಇಲ್ಲಿ ಯಾರೂ ಇಲ್ಲ. ಯಾರೂ ಭಯ ಪಡಬೇಕಾಗಿಲ್ಲ. ನಾನು ಆವತ್ತು ಮಾನ್ಯ ಜಿ.ಟಿ. ದೇವೇಗೌಡರಿಗೆ ಕೇಳಿಕೊಂಡಿದ್ದೆ, ಈ ವಿಷಯ enquiry ಮಾಡತಕ್ಕಂತಹ ದೃಷ್ಟಿಯಲ್ಲಿ ಕೇವಲ co-operative ಗೆ ಸಂಬಂಧಪಟ್ಟಿರತಕ್ಕಂತಹ ವಿಷಯವನ್ನು ಪ್ರಸ್ತಾಪ ಮಾಡಿ ಉತ್ತರ ಕೊಟ್ಟಿರಿ. ಆದರೆ co-operative Institution ನಿಂದ Registerar of Company Affairs ಗೆ ಕೊಟ್ಟಿರತಕ್ಕಂತಹ ದುಡ್ಡಿನ ಬಗ್ಗೆ ನಮ್ಮ ಕಾನೂನಿನ ವ್ಯಾಪ್ತಿಗೆ ಬರುವುದಿಲ್ಲ, ಅದಕ್ಕಾಗಿ ನಾವು enquiry ಮಾಡುವುದಕ್ಕಾಗುವುದಿಲ್ಲ ಎನ್ನತಕ್ಕಂತಹ ಮಾತನ್ನು ನೀವು ಹೇಳಬೇಕೆಂದು ಆ ದಿವಸ ಪ್ರಯತ್ನ ಮಾಡಿದಿರಿ. ಆದರೆ ನಾನು Home Minister ಗೆ ಕೇಳಿಕೊಂಡೆ. ಇಲ್ಲ ಹಾಗಾಗುವುದಿಲ್ಲ. ಇದೇ ಸಭೆಯಲ್ಲಿ ಕೆಲವು precedents ಇವೆ. ಆ precedents ನೀವು ತೆಗೆದು ನೋಡಬಹುದು.

ಉದಾಹರಣೆಗೆ ತಾವೇ ಅವತ್ತು ವಿನಿವಿಂಕ್‌ನ್ನು investigation ಮಾಡತಕ್ಕಂತಹ ಸದನ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದೀರಿ. ಆ ಕಂಪನಿ ಕೂಡ Registrar of Company Affairsನಲ್ಲಿ ಇದೆ. ಆ cognisence ತೆಗೆದುಕೊಂಡೇ ತಾವು investigation ಮಾಡಲಿಕ್ಕೆ ಆದೇಶ ಮಾಡಿದ್ದಿರಿ. ಆ ಆದೇಶದ ಪ್ರತಿ ಕೂಡ ನಮ್ಮಲ್ಲಿ ಇದೆ. ವಿನಿವಿಂಕ್ ರಿಪೋರ್ಟ್ ಕೂಡ ಇದೆ. ಅದಕ್ಕೋಸ್ಕರ ನಾನು ಹೇಳುವುದು ಇದರ ಬಗ್ಗೆ detailed investigation ಆಗಬೇಕು. ನಾನು ಅದರ ಎಲ್ಲ detail ಗಳಿಗೆ ಹೋಗುವುದಿಲ್ಲ. ಆ ಬ್ಯಾಂಕ್‌ನಲ್ಲಿ ಏನು ಹಗರಣ ಆಯಿತು, ಆ ಬ್ಯಾಂಕಿಗೆ ರೈತರು ದುಡ್ಡು ಹೇಗೆ ಕೊಟ್ಟರು, ಹೇಗೆ ಮಾಡಿದರು ಎನ್ನತಕ್ಕಂತಹ ವಿವರಗಳಿಗೆ ಹೋಗುವುದಿಲ್ಲ. ಆ ಎಲ್ಲ ವಿಷಯಗಳೂ ನಿಮ್ಮ ಗಮನಕ್ಕೆ ಬಂದಿವೆ. ತಮ್ಮ ಉತ್ತರದಲ್ಲಿ ತಾವು ಒಪ್ಪಿಕೊಂಡಿದ್ದೀರಿ. ಎಂಟು ಕೋಟಿ 70 ಲಕ್ಷ ಶೇರು ಹಣಕ್ಕೆ ನಾವು ಹಣವನ್ನು ಆ ಫ್ಯಾಕ್ಟರಿಗೆ ಸಂಧಾನ ಮಾಡಿದ್ದೇವೆ ಎಂದು. ಆ 8.70 ಕೋಟಿ ಹಣವನ್ನು ವಸೂಲು ಮಾಡುವುದಕ್ಕೆ ಇವತ್ತು ನಿಮ್ಮ ಇಲಾಖೆಯೇ ಮುಂದಾಗಿದೆ. ನಿಮಗೆ ಗೊತ್ತಿದೆ. Arbitrator order ಮಾಡಿದ್ದಾನೆ, ಹಣ ವಸೂಲು ಮಾಡಬೇಕೆಂದು ಕ್ರಮ ಜರುಗಿಸುತ್ತಿದ್ದಾನೆ. ಆ ಕ್ರಮ ಯಾರ ಮೇಲೆ ಜರುಗಿಸುತ್ತಿದ್ದಾರೆ? ರೈತರ ಮೇಲೆ ಜರುಗಿಸುತ್ತಿದ್ದಾರೆ.

ನಮಗೆ ಬೇಕಾಗಿರುವಂಥಾದ್ದು ಆ ರೈತರ ಹೆಸರಿನಲ್ಲಿ ಆ ಹಣವನ್ನು ಆ ಫ್ಯಾಕ್ಟರಿ ಮಾಲೀಕರು ತೆಗೆದುಕೊಂಡಿದ್ದಾರೆ. ಅದಕ್ಕೆ ರಸೀದಿ ಕೂಡ ತಮ್ಮ ಬ್ಯಾಂಕ್‌ನಲ್ಲಿದೆ. ಅದಕ್ಕೆ ಮೊದಲು ಆ ಫ್ಯಾಕ್ಟರಿಯನ್ನು ಪಾರ್ಟಿ ಮಾಡಿ ಎಂದು ಹೇಳಿ ನಿಮ್ಮ Arbitratorಗೆ ನಾವು ವಿನಂತಿಯನ್ನು ಮಾಡಿಕೊಂಡಿದ್ದೇವೆ. ಆದರೆ ದುರ್ದೈವವಶಾತ್ ನಿಮ್ಮ Arbitrator ನಿಮ್ಮ ಮಾತು ಕೇಳುತ್ತಾನೋ ಇಲ್ಲವೋ ಎಂಬ ಶಂಕೆ ಕೂಡ ಇವತ್ತು ನಮಗೆ ಬಂದಿದೆ. ಏಕೆಂದರೆ ನೀವು ಇಲಾಖೆಯಲ್ಲಿ ಹುಬ್ಬಳ್ಳಿಯಲ್ಲಿ ಒಬ್ಬರು ಜಾಯಿಂಟ್ ರಿಜಿಸ್ಟ್ರಾರ್ ಆಗಿರುವವರು ಚಿಕ್ಕ ಸಾಹುಕಾರ್‌ರವರು ಒಬ್ಬರು ಯಾರೋ ಇದ್ದಾರೆ, ಅವರಲ್ಲಿ ಪಾರ್ಟಿ ಮಾಡಿ ಅವರಿಗೆ ಆದೇಶ ಹೊರಡಿಸಿ ಎಂದು ಮೂರು ತಿಂಗಳುಗಳಿಂದ ಈ ಕೇಸ್ ಅವರ ಎದುರುಗಡೆ ನಡೆಯುತ್ತಿದೆ. ನೀವು ಆದೇಶ ಮಾಡಿದ ಮೇಲೆ ಮೂರು ತಿಂಗಳ ದಿನಾಂಕವನ್ನು ಆ ಮನುಷ್ಯ ಕೊಡುತ್ತಿದ್ದಾನೆ. ಎಲ್ಲ ದಾಖಲೆಗಳು ಅವನ ಎದುರುಗಡೆ ಇವೆ. ಬ್ಯಾಂಕಿನ ತಪ್ಪು ಎಲ್ಲಿ ಇದೆ ಎಂದು ಆ ರೆಕಾರ್ಡ್ ಅವನ ಬಳಿ ಇದೆ.

ನಾಲ್ಕು ವರ್ಷಗಳಿಂದ ಈ ಕೇಸ್‌ನ್ನು ಬುಕ್ ಮಾಡಿ investigation ಮಾಡಬೇಕಾಗಿತ್ತು. ನಾಲ್ಕು ವರ್ಷದ ನಂತರ ಕೊನೇ ಪಕ್ಷ ನಾವಾದರೂ ಅವರ ಗಮನಕ್ಕೆ ತಂದಾಗ ಈ ತರಹ ಉತ್ತರ ಕೊಟ್ಟುಕೊಂಡು ಹೋದರು ಎಂದರೆ, ಖಂಡಿತ ನಿಮ್ಮ ಇಲಾಖೆ ಇದ್ದೂ ಇಲ್ಲದ ಹಾಗಾಗುತ್ತದೆ. ಅದಕ್ಕೆ ದಯಮಾಡಿ ನಿಮ್ಮಿಂದ ನಾವು ಇಷ್ಟೇ ಬಯಸುತ್ತೇವೆ, ಮಾನ್ಯ ಮುಖ್ಯಮಂತ್ರಿಗಳ ಸಭೆಗೆ ತಾವೂ ಕೂಡ ಬಂದಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಮೂರನೇ ಮಹಡಿಯಲ್ಲಿ ಸಭೆ ಮಾಡಿದಾಗ ಆ ಫ್ಯಾಕ್ಟರಿಯ ಅಧ್ಯಕ್ಷರು, ಆ ಫ್ಯಾಕ್ಟರಿಯ ನಿರ್ದೇಶಕರು, MD ಯವರು ಬಂದು ಏನು ಹೇಳಿದರು, ಮೂರು ತಿಂಗಳುಗಳಲ್ಲಿ ಮಾರ್ಚ್ 31 ರೊಳಗೆ ನಾವು ಹಣವನ್ನು ಸಂದಾಯ ಮಾಡುತ್ತೇವೆ ಎನ್ನುವಂತಹ ಮಾತನ್ನಾಡಿದರು. ನಿಮಗೆ ನೆನಪು ಇದೆಯೋ ಇಲ್ಲ. ಆದರೆ ಈಗ ಮಾರ್ಚ್ 31 ಮುಗಿದು ಏಪ್ರಿಲ್ 31 ಕ್ಕೆ ಹೋಗುತ್ತಿದ್ದೇವೆ. ಹೇಗೂ ಹೌಸ್ ಕಮಿಟಿ ಇನ್ನೂ ಅಸ್ಥಿತ್ವದಲ್ಲಿ ಇದೆ. ವಿನಿವಿಂಕ್ ಬಗ್ಗೆ investigation ಮಾಡತಕ್ಕಂತಹ ಸದನ ಸಮಿತಿ ಇವತ್ತು ಮಾನ್ಯ ಮುನಿಯಪ್ಪನವರ ಅಧ್ಯಕ್ಷತೆಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಅದೇ ಸಮಿತಿಗೆ investigation ಗೆ ನೀವು ಇದನ್ನು ಒಪ್ಪಿಸುತ್ತೀರಿ ಎನ್ನತಕ್ಕಂತಹ ಮಾತನ್ನು ಹೇಳಿ ಬಿಟ್ಟರೆ ನಮ್ಮ ಕೆಲಸ ಮುಗಿಯುತ್ತದೆ.

ಶ್ರೀ ಜೆ.ಟಿ. ದೇವೇಗೌಡ (ಸಹಕಾರ ಸಚಿವರು) :– ಮಾನ್ಯ ಅಧ್ಯಕ್ಷರೆ, ಈಗಾಗಲೇ ಸಹಕಾರ ಇಲಾಖೆಗೆ ಸಂಬಂಧಪಟ್ಟಂತೆ ಸಿದ್ಧೇಶ್ವರ ಸಹಕಾರ ಬ್ಯಾಂಕಿನ ಬಗ್ಗೆ ನಾನು ಅವತ್ತೇ ಉತ್ತರವನ್ನು ಕೂಡ ಕೊಟ್ಟಿದ್ದೇನೆ. ಸನ್ಮಾನ್ಯ ಶಿವಾನಂದ ಪಾಟೀಲರು ಏನು ಕೇಳುತ್ತಿದ್ದಾರೆ, ಆ ಬಗ್ಗೆ ಅಧ್ಯಕ್ಷರು ಅವತ್ತು ಏನು ಮಾತನಾಡಿದರು ಎಂದು ಕೂಡ ತಾವು ಹೇಳಿದ್ದೀರಿ. ಅಧ್ಯಕ್ಷರ ಪೀಠದಲ್ಲಿ ಕುಳಿತು ಅವತ್ತು ಏನು ನಡೆದಿದೆ ಎನ್ನುವುದನ್ನು ಹೇಳಿದಿರಿ. ಇವತ್ತು ಅವರು ಏನು ಕೇಳುತ್ತಿದ್ದಾರೆ, ನಾವು ಏನು 64 ರ enquiry ಗೆ ಆದೇಶ ಮಾಡಿದ್ದೇವೆ. ಸಾಲ ವಸೂಲಾತಿಗೆ ಶೇರು ಸಾಲ ಕೊಟ್ಟಿರತಕ್ಕಂಥದ್ದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೇವೆ ಎನ್ನತ್ಕಕಂತಹ ವಿಚಾರವನ್ನು ಕೂಡ ಸ್ಪಷ್ಟಪಡಿಸಿದ್ದೇವೆ. ಅವರು ಏನು ಕೇಳುತ್ತಿದ್ದಾರೆ, ಆ ಸಕ್ಕರೆ ಕಾರ್ಖಾನೆ Registration of Company Act ಕೆಳಗಡೆ ಬರುತ್ತದೆ. ಆ ಕಾರಣಕ್ಕೋಸ್ಕರ ಅವತ್ತು ನಮ್ಮ ಕಾನೂನು ಸಚಿವರು ಕೂಡ ಆ Company Act ಮೇಲೆ ಯಾವ ರೀತಿ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥದ್ದು ಕೂಡ ಅವರು ಉತ್ತರದಲ್ಲಿ ಹೇಳಿದ್ದಾರೆ.

ನಾನೇ ಹೇಳುತ್ತಿದ್ದೇನೆ ಈಗಲೂ ಕೂಡ ಆ ಸಕ್ಕರೆ ಕಾರ್ಖಾನೆಯ ಶೇರು ಮೊಬಲಗಿಗೆ ನಾವು ಏನು ಸಾಲವನ್ನು ಕೊಟ್ಟಿದ್ದೇವೆ, ಆ ಬಗ್ಗೆ ಅವರು ನಮಗೆ ಶೇರು ಸರ್ಟಿಫಿಕೇಟ್ ಕೊಟ್ಟಿಲ್ಲ. ಅದರ ಬಗ್ಗೆ ಕೂಡ ಕ್ರಮ ತೆಗೆದುಕೊಳ್ಳಬೇಕೆಂದು ಅವರು ಹೇಳುತ್ತಿದ್ದಾರೆ. ಮತ್ತೊಂದು ಏನು ನೀವು ತೀರ್ಮಾನ ಕೊಟ್ಟ ಮೇಲೆ ಅಧಿಕಾರಿ ಏನೂ ಕ್ರಮ ತೆಗೆದುಕೊಂಡಿಲ್ಲ ಎನ್ನತಕ್ಕಂತಹ ಎರಡು ಪ್ರಶ್ನೆಗಳನ್ನು ಅವರು ಕೇಳುತ್ತಿದ್ದಾರೆ. Company Act ಮೇಲೆ ಕೇಂದ್ರ ಸರ್ಕಾರದ ಕಾನೂನಿನ ಅಡಿಯಲ್ಲಿ ಏನು ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪನೆ ಮಾಡಿದ್ದಾರೆ ಆ ಸಕ್ಕರೆ ಕಾರ್ಖಾನೆ ಮೇಲೆ ದುರುಪಯೋಗವಾಗಿರತಕ್ಕಂಥಾದ್ದರ ಬಗ್ಗೆ ಕಾನೂನಿನ ಸಲಹೆಯನ್ನು ಪಡೆದು ಕಾನೂನು ಪ್ರಕಾರ ಕ್ರಮ ಕೈಗೊಳ್ಳುತ್ತೇವೆ. ನಾವು ಏನು ಹೇಳುತ್ತಿದ್ದೇವೆ. ಅಧಿಕಾರಿಗಳು ಸರ್ಕಾರದ ಆದೇಶವನ್ನು ಉಲ್ಲಂಘನೆ ಮಾಡಿ ಅವರು ಯಾವುದೇ ಕ್ರಮವನ್ನು ಇದುವರೆಗೆ ಕೈಗೊಳ್ಳದೇ ಇದ್ದರೆ ಅವರ ಮೇಲೂ ಕೂಡ ಕಾನೂನು ರೀತಿಯಲ್ಲಿ ಕ್ರಮ ಜರುಗಿಸುತ್ತೇವೆ ಎನ್ನತಕ್ಕಂತಹ ಭರವಸೆಯನ್ನು ನಾನು ತಮ್ಮ ಮೂಲಕ ಕೊಡುತ್ತಿದ್ದೇನೆ.

ಶ್ರೀ ಎಸ್. ಶಿವಾನಂದ ಪಾಟೀಲ್ :– ಇಷ್ಟು ಉದ್ಧಟತನದ ಉತ್ತರ ಕೊಡುತ್ತಿದ್ದಾರೆ. ಇದು ಸರಿಯಲ್ಲ. ಅವರು ಒಳ್ಳೆಯವರಿದ್ದಾರೆ, ಅವರ ಬಗ್ಗೆ ನಮಗೆ ಗೌರವ ಇದೆ. ಈ ತರಹ ಅವರೇ ಮಾತನಾಡಿದರೆ ನಾವೇನು ಹೇಳುವುದು? ನಾವು ಏಕೆ ಕುಳಿತಿದ್ದೇವೆ ಇಲ್ಲಿ? ಹೋದ ಫೆಬ್ರುವರಿಯಲ್ಲಿ ಕೂಡ ಇದೇ ವಿಷಯ ಇದೇ ಸದನದಲ್ಲಿ ಚರ್ಚೆಯಾಗಲಿಲ್ಲ ಸುಮ್ಮನೆ ಹೋದಿವಿ. ಮೊನ್ನೆ ಅಧಿವೇಶನದಲ್ಲಿ ಕೂಡ Upper House ನಲ್ಲಿ ಬಿಲ್ ಬಿದ್ದು ಹೋಯಿತು ಎಂದು ಹೇಳಿ ಈ ಚರ್ಚೆ ನಡೆದಾಗ ಅವರೇ ಚೀರಾಟ ಗದ್ದಲಾಟ ಪ್ರಾರಂಭ ಮಾಡಿ ಬಿಟ್ಟರು. ಮೇಲ್ಮನೆಯನ್ನು ತೆಗೆದು ಒಗೆಯಬೇಕೆಂದು ಹೇಳಿದರು. ಆ ಸಂದರ್ಭದಲ್ಲಿ ಸ್ಪಷ್ಟವಾದ ಉತ್ತರ ಸಿಗಲಿಲ್ಲ. ಈಗ ನಾವು ಏನೋ ಕೇಳುತ್ತಿದ್ದೇವೆ, ಅವರು ಏನೋ ಮಾತನಾಡಿದರೆ ನೀವು ಅವರಿಗೆ ಹೇಳಬೇಕು.

ಸಾರ್ ಈಗ ನಾನು ಹೇಳುತ್ತಿರುವುದೇನೆಂದರೆ 14 ಕೋಟಿ ರೂಪಾಯಿಗಳ ಸಾಲವನ್ನು ರೈತರ ಹೆಸರ ಮೇಲೆ ತೆಗೆದುಕೊಂಡು ಒಂದು ಫ್ಯಾಕ್ಟರಿಗೆ ಹಾಕಿದ್ದಾರೆ. ಆದರೆ ಆ ರೈತರ ಜಮೀನನ್ನು ಹರಾಜು ಹಾಕುವುದಕ್ಕೆ ಸಹಕಾರ ಇಲಾಖೆಯವರೇ ನೋಟೀಸ್ ತೆಗೆದಿದ್ದಾರೆ. ಆದರೆ ಯಾವ ಫ್ಯಾಕ್ಟರಿಯವರು ಅದರ ಮೇಲೆ ದುಡ್ಡನ್ನು ತೆಗೆದುಕೊಂಡಿದ್ದಾರೆ ಆ ದುಡ್ಡನ್ನು ಕೊಡುವುದಕ್ಕೆ ಅವರು ಮುಂದೆ ಬರುತ್ತಿಲ್ಲ.

ಹದಿನಾಲ್ಕು ಕೋಟಿ, ಒಂದು, ಎರಡಲ್ಲ, ಇನ್ನೂರು ರೈತರ ಜಮೀನನ್ನು ಹರಾಜಿಗೆ ಇವರೇ ತೆಗೆದಿದ್ದಾರೆ. ಸೆಕ್ಷನ್ 17 ನಲ್ಲಿ ಪ್ರೊಸಿಡಿಂಗ್ಸ್ ಸ್ಟಾರ್ಟ್ ಆಗಿದೆ. ಆಕ್ಷನ್‌ಗೂ ಬಂದಿದೆ. ಇವೊತ್ತು ರೈತರ ಜಮೀನು ಹರಾಜಾಗಿ ಅವರು ಉರುಳು ಹಾಕಿಕೊಂಡ ಮೇಲೆ ನೀವು ಅವರ ನೆರವಿಗೆ ಬಂದರೆ ಏನಾಗುತ್ತದೆ? ನೀವೇ ಹೇಳಿ. ಕಡೇ ಪಕ್ಷ ನೀವು ಮಂತ್ರಿಗಳಾದ ಮೇಲೆ ಇದು ನಿಮ್ಮ ಗಮನಕ್ಕೂ ಬಂದಿರುತ್ತದೆ. ಆದರೆ ನಿಮ್ಮ ಮೇಲೆ ನಾನು ದೋಷಾರೋಪಣೆಯನ್ನು ಮಾಡುವುದಿಲ್ಲ. ಏಕೆಂದರೆ ಮಂತ್ರಿಗಳಾಗಿ ನೀವು ಬಂದಿರುವುದೇ ಎರಡೂರು ತಿಂಗಳ ಹಿಂದಿನಿಂದ. ಅದಾದ ಮೇಲಂತೂ ನಿಮ್ಮ ಗಮನಕ್ಕೆ ಬಂದಿದೆ. ಈ ಮೂರು ತಿಂಗಳು ಸಾಕಾಗಲಿಲ್ಲವೆ ನಿಮ್ಮ ಅರ್ಬಿಟ್ರೇಟರ್ ಒಂದು ಅವಾರ್ಡ್ ಪಾಸ್ ಮಾಡುವುದಕ್ಕೆ? ನೀವೇ ಹೇಳಿ.

ಶ್ರೀ ಜಿ.ಟಿ. ದೇವೇಗೌಡ :– ಈಗಾಗಲೇ ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ನಾನು ಈಗಲೂ ಹೇಳುವುದೇನೆಂದರೆ.....

ಶ್ರೀ ಶಿವಾನಂದ ಎಸ್. ಪಾಟೀಲ್ :– ಮಾನ್ಯ ಜಿ.ಟಿ. ದೇವೇಗೌಡರು ವಿನಿವಿಂಕ್ ಹಗರಣಕ್ಕೆ ಸಂಬಂಧಪಟ್ಟಂತೆ ಪರಿಶೀಲನೆ ಮಾಡಲು ಜಂಟಿ ಸದನ ಸಮಿತಿಯಲ್ಲಿ ಛೇರ್ಮನ್ ಆಗಿದ್ದರು. ಆ ಜಂಟಿ ಸದನ ಸಮಿತಿಗೇ ಇದನ್ನು.....

ಅಧ್ಯಕ್ಷರು :– ಶಿವಾನಂದ ಎಸ್. ಪಾಟೀಲರೆ, ಮಂತ್ರಿಗಳು ಉತ್ತರ ಹೇಳುವುದಕ್ಕೆ ಬಿಡಿ.

ಶ್ರೀ ಜಿ.ಟಿ. ದೇವೇಗೌಡ :– ಮಾನ್ಯ ಶಿವಾನಂದ ಪಾಟೀಲರೆ ನಾನು ತಮಗೆ ಹೇಳುತ್ತಿದ್ದೇನೆ. ಮುಖ್ಯಮಂತ್ರಿಗಳು ಮತ್ತು ನಾವು ಕುಳಿತಿದ್ದಂಥ ಸಂದರ್ಭದಲ್ಲಿ ನಿಮ್ಮ ಸಮಸ್ಯೆಗಳೇನು, ರೈತರ ಸಮಸ್ಯೆಗಳೇನು ಮತ್ತು ಆ ಫ್ಯಾಕ್ಟರಿಯವರದ್ದೇನು ಎನ್ನತಕ್ಕಂಥ ಹೇಳಿಕೆ, ಎಲ್ಲದರಲ್ಲೂ ಕೂಡ ನಾನೂ ಕೂಡ ಭಾಗಿಯಾಗಿದ್ದೇನೆ, ಭಾಗವಹಿಸಿದ್ದೇನೆ. ಆದರೆ ನಾವು ಇವೊತ್ತು ಏನು ಕೇಳುತ್ತಿದ್ದೀರಿ, ಅರ್ಬಿಟ್ರೇಟರ್ ಏನೂ ಕ್ರಮವನ್ನು ಕೈಗೊಂಡಿಲ್ಲವೆಂದು ತಾವು ಹೇಳುತ್ತಿದ್ದೀರಿ. ಅವರೇನಾದರೂ ಇದುವರೆವಿಗೂ ಕ್ರಮ ಕೈಗೊಳ್ಳದಿದ್ದರೆ ಅವರ ಮೇಲೆಯೇ ತುರ್ತಾಗಿ ಕ್ರಮವನ್ನು ಕೈಗೊಳ್ಳತಕ್ಕಂಥ ಕೆಲಸವನ್ನು ನಾನು ಮಾಡುತ್ತೇನೆ ಎನ್ನತಕ್ಕಂಥ ಭರವಸೆಯನ್ನು ನಿಮಗೆ ಕೊಟ್ಟಿದ್ದೇನೆ. ಮತ್ತೆ ನಾನು ನಿಮಗೆ ಏನು ಹೇಳುತ್ತೇನೆಂದರೆ ವಿನಿವಿಂಕ್ ರೀತಿಯಲ್ಲಿಯೇ ಬೇರೆ ಸದನ ಸಮಿತಿ ನೇಮಿಸಬೇಕು ಎನ್ನತಕ್ಕಂಥದ್ದು ತಮ್ಮ ಒಂದು.....

ಶ್ರೀ ಶಿವಾನಂದ ಎಸ್. ಪಾಟೀಲ್ :– ಇನ್ನೊಂದು ಸದನ ಸಮಿತಿ ನೇಮಿಸಿ ಎಂದು ಹೇಳುತ್ತಿಲ್ಲ. ಈಗಾಗಲೇ ಸದನ ಸಮಿತಿ ಎಕ್ಸಿಸ್ಟೆನ್ಸ್‌ನಲ್ಲಿ ಇದೆ. ತಾವೇ ವಿನಿವಿಂಕ್ ಸದನ ಸಮಿತಿಯ ಛೇರ್ಮನ್ ಆಗಿದ್ದಿರಿ. ತದನಂತರದಲ್ಲಿ ತಾವು ಮಂತ್ರಿಗಳಾದಿರಿ. ನೀವು ಆ ಸದನ ಸಮಿತಿಯಿಂದ ಹೋದಮೇಲೆ ಮಾನ್ಯ ಮುದ್ದಪ್ಪ ಮುನಿಯಪ್ಪನವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಆ ಸಮಿತಿ ಇನ್ನೂ ತನ್ನ ರಿಪೋರ್ಟ್‌ನ್ನು ಕೊಟ್ಟಿಲ್ಲ. ವಿನಿವಿಂಕ್ ಕೂಡ ಕಂಪನಿ ಅಫೇರ್ಸ್‌ನಲ್ಲಿಯೇ ಬರುತ್ತದೆ. ಅದೇ ರೀತಿ ಇದೂ ಕೂಡ ಬರುತ್ತದೆ. ಅದೇ ಇನ್‌ವೆಸ್ಟಿಗೇಟ್ ಸಮಿತಿಯಿಂದ ಇದನ್ನೂ ಕೂಡ ಇನ್‌ವೆಸ್ಟಿಗೇಟ್ ಮಾಡಿಸುತ್ತೇನೆ ಎನ್ನತಕ್ಕಂಥ ಒಂದೇ ಒಂದು ಭರವಸೆಯನ್ನು ಕೊಟ್ಟುಬಿಡಿ. ಇದು ನನ್ನ ಬೇಡಿಕೆ.

ಶ್ರೀ ಜಿ.ಟಿ. ದೇವೇಗೌಡ :– ನಾನಿಷ್ಟೇ ನಿಮಗೆ ಸ್ಪಷ್ಟವಾಗಿ ಹೇಳಬಯಸುತ್ತೇನೆ. ನಾನು ಸಹಕಾರ ಇಲಾಖೆಯ ಮಂತ್ರಿಯಾಗಿ ಸಹಕಾರ ಕಾನೂನು ರೀತಿಯಲ್ಲಿ ಅವರ ಮೇಲೆ ನೇರವಾಗಿ ಕ್ರಮ ಕೈಗೊಳ್ಳತಕ್ಕಂಥ ಅಧಿಕಾರ ಇಲ್ಲದೇ ಇರುವುದರಿಂದ ಕಂಪನಿ ಆ್ಯಕ್ಟ್ ಕೆಳಗಡೆ ಇದು ಬರುವುದರಿಂದ ನಾನು ಕಾನೂನಿನ ಸಲಹೆಯನ್ನು ಪಡದು ಏನು ಆ ಫ್ಯಾಕ್ಟರಿ ರೈತರಿಗೆ ಅನ್ಯಾಯ ಮಾಡುತ್ತಿದೆ ಅದರ ಬಗ್ಗೆ ವಿನಿವಿಂಕ್ ಸದನ ಸಮಿತಿಗೆ ವಹಿಸಬೇಕೇ ಅಥವಾ ಅದಕ್ಕೆ ಬೇರೆ ಇನ್ಯಾವುದೇ ರೀತಿಯಲ್ಲಿ ಕ್ರಮ ಕೈಗೊಳ್ಳಬಹುದು ಎನ್ನತಕ್ಕಂಥಾದ್ದರ ಬಗ್ಗೆ ಕಾನೂನಿನ ಸಲಹೆಯನ್ನು ಪಡೆದು ಖಂಡಿತ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಶಿವಾನಂದ ಎಸ್. ಪಾಟೀಲ್ :– ಸಾರ್ ನಾನು ನಿಮಗೆ....

ಅಧ್ಯಕ್ಷರು :– ಶಿವಾನಂದರವರೆ, ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ಉತ್ತರವನ್ನು ಹೇಳಿದ್ದಾರೆ. ನಿಮಗೂ ಅವರಿಗೂ ಚರ್ಚೆ ಹೀಗೆ ನಡೆದರೆ ರಾತ್ರಿ ಹನ್ನೆರಡು ಘಂಟೆಯಾದರೂ ಮುಗಿಯುವುದಿಲ್ಲ. ಕೋರ್ಟ್‌ನಲ್ಲಿ ನಡೆಯುತ್ತದಲ್ಲ ಆ ರೀತಿ ಇಲ್ಲಿಯೂ ನಡೆಯುವುದನ್ನು ನಾವು ನೋಡಬೇಕಾಗುತ್ತದಷ್ಟೆ.

ಶ್ರೀ ಶಿವಾನಂದ ಎಸ್. ಪಾಟೀಲ್ :– ಮಾನ್ಯ ಅಧ್ಯಕ್ಷರೆ, ಅವರಿಗೆ ನಾನಿಷ್ಟೇ ಸಿಂಪಲ್ ಆಗಿ ಕೇಳುತ್ತಿದ್ದೇನೆ.

ಅಧ್ಯಕ್ಷರು :– ಅವರು ಸ್ಪಷ್ಟವಾಗಿ ಹೇಳಿದ್ದಾರಲ್ಲ. ಅಧಿಕಾರಿಗಳು ಸರಿಯಾದ ರೀತಿಯಲ್ಲಿ ಕ್ರಮ ಕೈಗೊಂಡಿಲ್ಲದಿದ್ದರೆ ಅವರ ಮೇಲೆಯೇ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದಾರಲ್ಲ.

ಶ್ರೀ ಶಿವಾನಂದ ಎಸ್. ಪಾಟೀಲ್ :– ಸದನ ಸಮಿತಿ ಈಗಾಗಲೇ ಇದೆಯಲ್ಲ ಅದಕ್ಕೆ ಇದನ್ನು ವಹಿಸಿ ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು :– ಅದನ್ನು ಹೇಳಿದ್ದಾರಲ್ಲ. ಆ ಸಮಿತಿಗೆ ಸಹ ವಹಿಸುತ್ತೇವೆಂದು.

ಶ್ರೀ ಶಿವಾನಂದ ಎಸ್. ಪಾಟೀಲ್ :– ಮಾನ್ಯ ಮಂತ್ರಿಗಳು ಸದನ ಸಮಿತಿಗೆ ಇದನ್ನು ವಹಿಸುತ್ತೇವೆ ಎಂದು ಹೇಳಿಬಿಡಲಿ.

ಅಧ್ಯಕ್ಷರು :– ವಹಿಸುತ್ತೇವೆ ಎಂದು ಹೇಳಿದರಲ್ಲ.

ಶ್ರೀ ಶಿವಾನಂದ ಎಸ್. ಪಾಟೀಲ್ :– ಇಲ್ಲಾ ಸಾರ್. ಅದನ್ನು ಅವರು ಹೇಳುತ್ತಿಲ್ಲ. ಅದನ್ನೇ ನಾವು ನಿಮಗೆ ಕೇಳುತ್ತಿದ್ದೇವೆ. ನೀವು ನಮ್ಮ ನೆರವಿಗೆ ಬರಬೇಕು. ಆ ಸಮಿತಿಗೆ ಇದನ್ನು ವಹಿಸಲಿ. ಆ ಸಮಿತಿಗೆ ವಹಿಸುತ್ತೇನೆ ಎಂದು ಮಂತ್ರಿಗಳು ಹೇಳಿದರೆ ಸಾಕು.

ಅಧ್ಯಕ್ಷರು :– ನೀವು ಹೇಳಿರುವುದನ್ನೆಲ್ಲಾ ಪರಿಶೀಲನೆ ಮಾಡಿ ಅಗತ್ಯ ಬಿದ್ದರೆ ಆ ಸಮಿತಿಗೆ ವಹಿಸುತ್ತಾರೆ.

ಶ್ರೀ ಶಿವಾನಂದ ಎಸ್. ಪಾಟೀಲ್ :–ಅಗತ್ಯ ಇದ್ದರೆ ಎಂದರೆ ಹೇಗೆ ಅಧ್ಯಕ್ಷರೆ?

ಅಧ್ಯಕ್ಷರು :– ಹೌದು ಮತ್ತೆ. ಅಗತ್ಯ ಇಲ್ಲದಿದ್ದರೂ ಮಾಡುವುದಕ್ಕಾಗುತ್ತದೆಯೇ? ನೀವು ಹೇಳಿರುವುದನ್ನೆಲ್ಲಾ ಅವರೂ ಕೂಡ ಪರಿಶೀಲನೆ ಮಾಡಬೇಕಲ್ಲ.

ಶ್ರೀ ಶಿವಾನಂದ ಎಸ್. ಪಾಟೀಲ್ :– 14 ಕೋಟಿ ಫ್ರಾಡ್ ಆಗಿರುವುದು ಅವರ ಕಣ್ಣೆದುರಿನಲ್ಲಿಯೇ ಇದೆ. ಅವರು ಕೊಟ್ಟಿರುವ ಉತ್ತರದಲ್ಲಿದೆ. ಕಾಲಿಂಗ್ ಅಟೆನ್‌ಶನ್‌ನಲ್ಲಿ ಇದೇ ಉತ್ತರವನ್ನು ತರಿಸಿಕೊಂಡು ಓದಿದ್ದಾರೆ.

ಅಧ್ಯಕ್ಷರು :– ಸಹಕಾರ ಸಚಿವರೆ, ಈಗಾಗಲೇ ಇರುವ ಸದನ ಸಮಿತಿಗೆ ಇದನ್ನೂ ಕೂಡ ವಹಿಸಬೇಕು ಎಂದು ಶಿವಾನಂದ ಪಾಟೀಲರು ಹೇಳುತ್ತಿದ್ದಾರೆ. ಅದನ್ನು ಪರಿಶೀಲನೆ ಮಾಡಿಸಿ ಆ ರೀತಿ ಏನಾದರೂ ಫ್ರಾಡ್ ಆಗಿದ್ದರೆ ಇದನ್ನೂ ಕೂಡ ಆ ಸದನ ಸಮಿತಿಗೆ ವಹಿಸಿ.

ಶ್ರೀ ಶಿವಾನಂದ ಪಾಟೀಲ್ :- ಅಷ್ಟೇ ನಮಗೆ ಬೇಕಾಗಿರುವುದು. ಆ ರೀತಿಯ ಉತ್ತರವನ್ನು ನಮಗೆ ಕೊಡಿಸಿ.

(ಆ) <u>ತುಮಕೂರು ವಿಶ್ವವಿದ್ಯಾಲಯದ ಕಟ್ಟಡದ ಬಗ್ಗೆ :</u>

ಶ್ರೀ ಹೆಚ್. ನಿಂಗಪ್ಪ :- ಮಾನ್ಯ ಅಧ್ಯಕ್ಷರೆ, ನಾನು ಮೊದಲನೆಯ ದಿವಸದಿಂದಲೂ ಕೂಡ ಒಂದು ಪ್ರಮುಖವಾದ ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದು ತಮ್ಮ ಅನುಮತಿಗೋಸ್ಕರ ಕಾಯುತ್ತಿದ್ದೆ. ಇವೊತ್ತು ನೀವು ನನಗೆ ಅನುಮತಿಯನ್ನು ಕೊಟ್ಟಿದ್ದೀರಿ, ಬಹುಶಃ ಅದೂ ಯಾರೂ ಇಲ್ಲದಂಥ ಸಂದರ್ಭದಲ್ಲಿ. ಇವೊತ್ತು ನಾನು ಪ್ರಸ್ತಾಪ ಮಾಡಬೇಕೆಂದಿರುವ ವಿಚಾರವೇನೆಂದರೆ ಸುಮಾರು ಎರಡೂವರೆ ವರ್ಷಗಳ ಹಿಂದೆ ತುಮಕೂರು ವಿಶ್ವವಿದ್ಯಾಲಯ ಪ್ರಾರಂಭವಾಯಿತು. ಪ್ರಾರಂಭವಾದ ಮೇಲೆ ಆ ವಿಶ್ವವಿದ್ಯಾಲಯವನ್ನು ಉದ್ಘಾಟನೆ ಮಾಡುವುದಕ್ಕೆ ಸುಮಾರು ಎರಡು ವರ್ಷಗಳ ಕಾಲ ಕಾಯಬೇಕಾಗಿ ಬಂತು. ಆದರೆ ಇವೊತ್ತು ಆ ವಿಶ್ವವಿದ್ಯಾಲಯದ ಸ್ಥಿತಿಗತಿ ಹೇಗಿದೆ ಎಂದರೆ ಮೂಲಭೂತ ಸೌಕರ್ಯಗಳಿಲ್ಲ, ಸ್ವಂತ ಕಟ್ಟಡವಿಲ್ಲ, ಕಟ್ಟಡ ನಿರ್ಮಾಣ ಮಾಡಬೇಕಾದರೆ ಅವಶ್ಯಕವಾಗಿರತಕ್ಕಂಥ ಭೂಮಿ ಕೂಡ ಇವೊತ್ತಿಗೂ ಸರ್ಕಾರ ವತಿಯಿಂದ ಕೊಡತಕ್ಕಂಥ ಒಂದು ಕೆಲಸ ನಡೆದಿಲ್ಲ. ಹಿಂದೆ ದೇವರಾಯನದುರ್ಗದ ಪ್ರದೇಶದಲ್ಲಿ ಏನು ಹುಲ್ಲುಬಂದಿ ಎಂದು ಇತ್ತೋ ಆ ಹುಲ್ಲುಬಂದಿ ಪ್ರದೇಶವನ್ನು ವಿಶ್ವವಿದ್ಯಾಲಯದ ಕಟ್ಟಡ ನಿರ್ಮಾಣಕ್ಕೋಸ್ಕರ ಸ್ವಾಧೀನಪಡಿಸಿಕೊಂಡಂಥ ಒಂದು ಕೆಲಸವಾಗಿತ್ತು. ಆದರೆ ಅದು ಬಹಳ ಹಿಂದಿನ ದಾಖಲೆಯಲ್ಲಿ ಅರಣ್ಯ ಭೂಮಿ ಎಂದು ಏನು ದಾಖಲಾಗಿತ್ತೋ ಆ ಕಾರಣದಿಂದ ಅದನ್ನು ಕೊಡುವುದಕ್ಕೆ ಬರುವುದಿಲ್ಲ, ಪರಿಸರ ಹಾಳಾಗುತ್ತದೆ ಎನ್ನುವ ಕಾರಣವನ್ನು ಮುಂದಿಟ್ಟು ಪರಿಸರವಾದಿಗಳು ಸುಪ್ರೀಂಕೋರ್ಟ್‌ವರೆಗೂ ಹೋದಂಥ ಸಂದರ್ಭದಲ್ಲಿ ಆ ಪ್ರದೇಶದಲ್ಲಿ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡುವುದಕ್ಕೆ ಸಾಧ್ಯವಾಗಲಿಲ್ಲ.

ಇವೊತ್ತು ತುಮಕೂರು ತಾಲ್ಲೂಕಿನಲ್ಲಿ ಸುಮಾರು ಕಡೆ ಸರ್ಕಾರಿ ಜಮೀನಿದೆ. ಅದರಲ್ಲೂ ಕೂಡ ರೆವಿನ್ಯೂ ಲ್ಯಾಂಡ್, ಗೋಮಾಳಕ್ಕೆ ಸೇರಿದಂಥ ಜಮೀನಿದೆ. ಆ ಜಮೀನನ್ನು ಇವೊತ್ತು ಸ್ವಾಧೀನಕ್ಕೆ ತೆಗೆದುಕೊಂಡು ವಿಶ್ವವಿದ್ಯಾಲಯದ ಕಟ್ಟಡವನ್ನು ಕಟ್ಟುವುದಕ್ಕೆ ಅದನ್ನು ಉಪಯೋಗಿಸಿಕೊಳ್ಳಬಹುದಾಗಿತ್ತು. ಆದರೆ ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಇದುವರೆವಿಗೆ ಯಾವುದೇ ಒಂದು ಕ್ರಮವನ್ನು ಕೈಗೊಂಡಿಲ್ಲ. ಇವೊತ್ತು ತುಮಕೂರು ಜಿಲ್ಲೆಗೆ ಸೀಮಿತವಾಗಿ ಸ್ಥಾಪನೆಯಾಗಿರತಕ್ಕಂಥ